ಅಸಲು ದಾವಾ ಸಂಖ್ಯೆ **288 – 2019** ಪಿ.ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **25.11.2024.**

ಪಾಟೀ ಸವಾಲು ಃ ಶ್ರೀ ಸಿ.ಆರ್ ಪ್ರತಿವಾದಿಗಳ ಪರ ವಕೀಲರಿಂದಃ

ಈ ದಾವೆಯನ್ನು ನನ್ನ ತಂದೆ ಸಲ್ಲಿಸಿರುತ್ತಾರೆ. ನನ್ನ ಸಂದೆ ಬದುಕಿದ್ದಾಗ ನನಗೆ ಈ ಪ್ರಕರಣವನ್ನು ನಡೆಸಲು ಸಾಮಾನ್ಯ ಮೊಕ್ತಾರು ನಾಮೆಯನ್ನು ಬರೆದು ಕೊಟ್ಟಿದ್ದರು. ನನ್ನ ತಂದೆಯ ತಂದೆಯ ಹೆಸರು ಸಿ.ಎನ್. ನರಸಯ್ಯ. ನನ್ನ ತಾತನ ತಂದೆಯ ಹೆಸರು ಕೃಷ್ಣಯ್ಯ ಶೆಟ್ಟಿ. ನನ್ನ ತಾತನ ತಂದೆಗೆ, ನನ್ನ ತಾತನನ್ನು ಸೇರಿ ಒಟ್ಟು 5 ಜನ ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 4 ಜನ ಗಂಡು ಮಕ್ಕಳು ಮಾತ್ರ ಎಂದು ನುಡಿಯುತ್ತಾರೆ. ನನ್ನ ತಾತನ ತಂದೆಗೆ 4 ಜನ ಗಂಡು ಮಕ್ಕಳಲ್ಲದೇ ಸುಬ್ಬಮ್ಮ ಎಂಬ ಹೆಣ್ಣು ಮಗಳು ಇದ್ದಳು ಎಂದರೆ ಸರಿಯಲ್ಲ. ಸದರಿ ಸುಬ್ಬಮ್ಮ ರವರಿಗೆ ಸರೋಜಮ್ಮ ಮತ್ತು ಶ್ರೀನಿವಾಸ ಎಂಬ ಇಬ್ಬರು ಮಕ್ಕಳು ಇರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ತಾತನ ತಂದೆಯ ಹೆಸರು ಕೃಷ್ಣಯ್ಯ ಶೆಟ್ಟಿ ಆಗಿರುವುದಿಲ್ಲ ನರಸಿಂಹಯ್ಯ ಆಗಿರುತ್ತದೆ ಎಂದರೆ ಸರಿ.

ನನ್ನ ತಾತನಿಗೆ ನನ್ನ ತಂದೆಯು ಸೇರಿ ಒಟ್ಟು ಮೂರು ಜನ ಮಕ್ಕಳು ಅವರುಗಳೆಂದರೆ, ನಾಗಮ್ಮ, ನನ್ನ ತಂದೆ ನರಸಿಂಹಮೂರ್ತಿ ಮತ್ತು ನಾಗರಾಜು. ನಾಗಮ್ಮ ರವರನ್ನು ನಮ್ಮ ಊರಿಗೆ ಮದುವೆ ಮಾಡಲಾಗಿದೆ. ಸದರಿ ನಾಗಮ್ಮ ಈಗಾಲೂ ಜೀವಂತ ಇದ್ದಾರೆ. ದಾವೆಯನ್ನು ಸಲ್ಲಿಸಲು ನಾಗಮ್ಮರವರನ್ನು ಕೇಳಿದ್ದು ಆದರೆ ಅವರು ನನಗೆ ಆಸ್ತಿಯಲ್ಲಿ ಭಾಗ ಬೇಡ ಎಂದು ಹೇಳಿದ್ದರಿಂದ ಈ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ನನ್ನ ತಾತ ಮತ್ತು ತಾತನ ಸಹೋದರರು 1960 ರ ಹಿಂದೆಯೇ ತಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ತಮ್ಮ ಹಿಸ್ಸೆಗೆ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ವಿಲೇವಾರಿ ಮಾಡಿ ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತನ ಸಹೋದರ ದೊರೆಸ್ವಾಮಿಗೆ ವೆಂಕಟ ನರಸಿಂಹಯ್ಯ ಎಂಬ ಇನ್ನೊಂದು ಹೆಸರು ಇದೆ ಎಂದರೆ ಸರಿ. ಸದರಿ ವೆಂಕಟನರಸಿಂಹಯ್ಯ ರವರು ಪುಟ್ಟಮ್ಮ ರವರನ್ನು ಮದುವೆ ಯಾಗಿದ್ದು, ಆದರೆ ಅವರು ಮಕ್ಕಳು ಇಲ್ಲದೆ

ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿ ವೆಂಕಟ ನರಸಿಂಹಯ್ಯ ರವರ ತನ್ನ ಜೀವಿತ ಅವಧಿಯಲ್ಲಿ ತನ್ನ ಹಿಸ್ಸೆಗೆ ಬಂದ ಆಸ್ತಿಗಳ ಸಂಬಂಧ ತನ್ನ ಸಹೋದರ ಸಿ.ಎನ್ ರಾಮಯ್ಯ ಅಂದರೆ 12 ಪ್ರತಿವಾದಿಯ ತಂದೆಗೆ ನೊಂದಾಯಿತ ಹಕ್ಕು ಖುಲಾಸೆ ಪತ್ರವನ್ನು ಬರೆದು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಹಕ್ಕು ಖುಲಾಸೆ ಪತ್ರದ ರದ್ದತಿಯನ್ನು ಕೋರಿ ವೆಂಕಟನರಸಿಂಹಯ್ಯ ರವರ ಹೆಂಡತಿ ಪುಟ್ಟಮ್ಮ ರವರು ಸಿ.ಎನ್. ರಾಮಯ್ಯ ರವರ ವಿರುದ್ಧ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ ವಿಚಾರಣೆಯನ್ನು ಮಾಡದೆ ದಾವೆಯು ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆ ವಜಾಗೊಂಡ ನಂತರ ಪುಟ್ಟಮ್ಮ ರವರು ಮತ್ತೆ ಸಿ.ಎನ್ ರಾಮಯ್ಯ ರವರ ವಿರುದ್ದ ಅಸಲು ದಾವಾ ಸಂಖ್ಯೆ 46/1966 ರಂತೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯು ಪುಟ್ಟಮ್ಮ ರವರ ಪರವಾಗಿ ತೀರ್ಪು ಮತ್ತು ಡಿಕ್ರಿಯಾಗಿದ್ದು ನಂತರ ಸದರಿ ಡಿಕ್ರಿಯ ಪ್ರಕಾರ ಜಾರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಪ್ರಶ್ನಿಸಿ ಸಿ.ಎನ್. ರಾಮಯ್ಯ ರವರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಆರ್.ಎಸ್.ಎ ಸಂಖ್ಯೆ 162/1970 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯಲ್ಲಿ ಪ್ರಕರಣವು ರಾಜಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರಾಜಿಯಂತೆ ಪುಟ್ಟಮ್ಮ ರವರು 9 ಸಾವಿರ ರೂಗಳನ್ನು ಪಡೆದು ಸಿ.ಎನ್. ರಾಮಯ್ಯ ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ